# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ:– 19–02–2022 ರಂದು ಬೆಳಗ್ಗೆ:– 11.30 ಗಂಟೆಗೆ ಶ್ರೀ. ಶ್ರೀ ಶಿವಕುಮಾರ ಸ್ವಾಮೀಜಿ ಸಾರ್ವಜನಿಕ ಸೇವಾ ಸಂಕೀರ್ಣ ವಾರ್ಡ್ ಸಂಖ್ಯೆ 126 ಮಾರುತಿಮಂದಿರದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.**

ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಪರಿಣಾಮಕಾರಿಯಾಗಿ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಪಾಲಿಕೆಯ ವಾರ್ಡ್ ಹಂತದಲ್ಲಿ ಸಮಿತಿಗಳನ್ನು ರಚಿಸುವ ಸಲುವಾಗಿ ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಕಛೇರಿ ಆದೇಶದ ಸಂಖ್ಯೆ:ಬಿ12(5)/ಪಿ.ಆರ್/35/2020–21/21–09–2020ರ ಆದೇಶದಂತೆ ನೋಡೆಲ್ ಅಧಿಕಾರಿಯನ್ನಾಗಿ ಶ್ರೀ. ಜಯಶಂಕರ್ ರೆಡ್ಡಿ, ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಸೌಕರ್ಯ, ಮಹದೇವಪುರ ವಿಭಾಗ, ಬಿ.ಬಿ.ಎಂ.ಪಿ ರವರನ್ನು ನೇಮಿಸಲಾಗಿದ್ದು, ಸದರಿ ಆದೇಶದಂತೆ ವಾರ್ಡ್ ಮಟ್ಟದಲ್ಲಿ ಸಾರ್ವಜನಿಕರಿಗೆ ಪ್ರಮುಖವಾದ ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ನಿರ್ವಹಣೆ, ನೀರು ಸರಬರಾಜು ಮತ್ತು ಒಳಚರಂಡಿ ಮತ್ತು ಇನ್ನಿತರ ಕಲ್ಯಾಣ ಕಾರ್ಯಕ್ರಮಗಳಂತಹ ಹಲವಾರು ಸೌಲಭ್ಯಗಳನ್ನು ಪರಿಣಾಮಕಾರಿಯಾಗಿ ಒದಗಿಸುವ ನಿಟ್ಟನಲ್ಲಿ ಮತ್ತು ಪಾಲಿಕೆಯ ಹಾಗೂ ಸಾರ್ವಜನಿಕರ ನಡುವೆ ಸಮನ್ವಯ ಸಾದಿಸುವ ನಿಟ್ಟಿನಲ್ಲಿ ಪಾಲಿಕೆಯ ವಾರ್ಡ್ ಹಂತದಲ್ಲಿ ಸಮಿತಿ ಸಭೆಗೆ ಈ ಕೆಳಕಂಡ ಅಧಿಕಾರಿ ವರ್ಗ/ಸದಸ್ಯರು ಮತ್ತು ಸ್ಥಳೀಯ ನಾಗರೀಕರು ಹಾಜರಾಗಿದ್ದರು.

**ಸಭೆಗೆ ಹಾಜರಿದ್ದ ಅಧಿಕಾರಿಗಳು ಮತ್ತು ಸದಸ್ಯರು:–**

| ಕ್ರ. ಸಂ | ಹೆಸರು | ಮೊಬೈಲ್ ಸಂಖ್ಯೆ |
|---|---|---|
| 1 | ನೋಡೆಲ್ ಅಧಿಕಾರಿ: ಶ್ರೀ. ಜಯಶಂಕರ್ ರೆಡ್ಡಿ, ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಸೌಕರ್ಯ, ಮಹದೇವಪುರ ವಿಭಾಗ, ಬಿ.ಬಿ.ಎಂ.ಪಿ. | 9741697632 |
| 2 | ಕಾರ್ಯದರ್ಶಿ ಮತ್ತು ಸಂಚಾಲಕರು<br>ಶ್ರೀ. ರವಿರಾಜ್ ಎಸ್. ಪಿ, ಸಹಾಯಕ ಅಭಿಯಂತರರು, ವಾರ್ಡ್ ನಂ.126 | 9980764000 |
| 3 | ಶ್ರೀ. ಮುನೀರ್‌ಪಾಷಾ, BESCOM- Ward no.126, Maruthimandira. | 9449869201 |
| 4 | ಶ್ರೀ. ಲಕ್ಷ್ಮಿ ನರಸಿಂಹಯ್ಯ, ತೋಟಗಾರಿಕೆ ಅಧಿಕಾರಿ, ಚಂದ್ರಾಬಡಾವಣೆ. | 9845257299 |
| 5 | ಶ್ರೀ. ರಂಗದಾಮಯ್ಯ, ಕಾರ್ಯ ನಿರ್ವಾಹಕರು, ಮಾರುತಿಮಂದಿರ. | 9880376090 |
| 6 | ಶ್ರೀ. ರಾಹುಲ್ ರಾಠೋಡ್, AE (BWSSB), ChandraLayout. | 7026266677 |
| 7 | ಶ್ರೀಮತಿ. ಮಾಲತಿ, ಆರೋಗ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಮೂಡಲಪಾಳ್ಯ. | 9632112539 |
| 8 | ಶ್ರೀ. ಹೇಮಾವತಿ, ಎಚ್.ಜಿ, Senior Health Inspector, ChandraLayout. | 9480484746 |
| 9 | ಶ್ರೀ. ಬಾಬು, (TI – W.126) | 994534509 |
| 10 | ಶ್ರೀ. ವಿ. ಯಾಕುಬ್ ಬೆರ್ರಿ. – (RWA – Canarabank Colony)- ಸದಸ್ಯರು | 9741333900 |
| 11 | ಶ್ರೀ. ಶಿವಶಂಕರ್. ಎ. ಎಂ.– (RWA – Vinayaka Layout)- ಸದಸ್ಯರು | 9448055204 |
| 12 | ಶ್ರೀ. ಎ.ಎಸ್.ವಿ. ಪ್ರಸಾದ್ –ಸದಸ್ಯರು. | 8277335854 |
| 13 | ಶ್ರೀ. ಟಿ. ರಾಮು, (RWA – MRCR Layout)- ಸದಸ್ಯರು | 9900709101 |

*****

ದಿನಾಂಕ: 19-02-2022 ರಂದು ಬೆಳಿಗ್ಗೆ 11.30 ಗಂಟೆಗೆ ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ, ಅಧ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ಸದಸ್ಯರು ಮತ್ತು ನಾಗರಿಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

<u>**ಚರ್ಚಿಸಲಾದ ವಿಷಯಗಳ ವಿವರಗಳು:-**</u>

1. ಶ್ರೀಮತಿ. ಮಾಲತಿ, ಆರೋಗ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಮೂಡಲಪಾಳ್ಯ ರವರು ಮಾತನಾಡುತ್ತಾ,
   - ವಾರ್ಡ್‌ನ ವ್ಯಾಪ್ತಿಯಲ್ಲಿ ಮಕ್ಕಳಿಗೆ Pulse Polio ಕೊಡಲು ಸೂಚಿಸುತ್ತಾ ದಿನಾಂಕ: 27-02-2022 ರಂದು ನೀಡಲಾಗುವುದು ಎಂದು ತಿಳಿಸಿದರು.
   - ವಾರ್ಡ್ ವ್ಯಾಪ್ತಿಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ 1) B.P Apparatus, 2) Register (MEH), 3) Stethescope, 4) Pulse Polio etc., ಈ ಎಲ್ಲಾ ಸಲಕರಣೆಗಳನ್ನು ತರೆಸುವ ಸಲುವಾಗಿ ವಾರ್ಡ್ ಸಮಿತಿ ಸಭೆಯಲ್ಲಿ ಚರ್ಚಿಸಿ ಖರೀದಿಸಲು ಸೂಚಿಸಲಾಗಿದೆ ಎಂದು ತಿಳಿಸಿದರು, ಈ ವಿಷಯಕ್ಕೆ ಸಭೆಯಲ್ಲಿ ಹಾಜರಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರು ಮತ್ತು ಅಧಿಕಾರಿಗಳು ಖರೀದಿಸಲು ಒಪ್ಪಿರುತ್ತಾರೆ.
2. ಶ್ರೀ. ರಾಮನಾಥ್ ಶೆಟ್ಟಿ, 4ನೇ ಮುಖ್ಯರಸ್ತೆ, ವಿನಾಯಕ ಬಡಾವಣೆ- ಸಾರ್ವಜನಿಕರು ರವರು ಮಾತನಾಡುತ್ತಾ,
   - 4ನೇ ಮುಖ್ಯರಸ್ತೆ, ವಿನಾಯಕ ಬಡಾವಣೆಯಲ್ಲಿ ಪಾದಚಾರಿ ಮಾರ್ಗದಲ್ಲಿ ವಾಹನ ನಿಲುಗಡೆ ಮಾಡಿದ್ದು, ಗುಜರಿ ಅಂಗಡಿ ವಸ್ತುಗಳನ್ನು ಮನೆಯ ಕಾಂಪೌಂಡ್‌ಗೆ ಸೇರಿದಂತೆ ಸಂಗ್ರಹಿಸಿದ್ದು ಇದರಿಂದ ಸುತ್ತಮುತ್ತಲಿನ ನಿವಾಸಿಗಳಿಗೆ ತೊಂದರೆಯಾಗುತ್ತಿರುವ ಬಗ್ಗೆ ವಾರ್ಡ್ ಸಮಿತಿ ಸಭೆಯಲ್ಲಿ ತಿಳಿಸಿದರು.

     <u>**ಕ್ರಮ:**</u> ಈ ಬಗ್ಗೆ ಮಾತನಾಡಿದ ವಾರ್ಡ್ ನೋಡಲ್ ಅಧಿಕಾರಿ ಟ್ರಾಫಿಕ್ ಪೋಲೀಸ್, ಘನತ್ಯಾಜ್ಯ ನಿರ್ವಹಣೆ ಮತ್ತು ವಾರ್ಡ್ ಅಭಿಯಂತರರು ಹಾಗೂ ಆರೋಗ್ಯ ಅಧಿಕಾರಿಗಳೊಂದಿಗೆ ಜಂಟಿ ತಪಾಸಣೆ ನಡೆಸಲು ತೀರ್ಮಾನಿಸಲಾಗಿದೆ.
3. ಶ್ರೀ. ಎ.ಎಸ್.ವಿ ಪ್ರಸಾದ್ - ಸದಸ್ಯರು ರವರು ಮಾತನಾಡುತ್ತಾ,
   - ವಿನಾಯಕ ಬಡಾವಣೆಯ 1ನೇ ಮುಖ್ಯರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ರಸ್ತೆ ಅಗೆದಿರುವುದನ್ನು ಡಾಂಬರೀಕರಣ ಮಾಡಿ ಪೂರ್ಣಗೊಳಿಸುವುದರ ಬಗ್ಗೆ ಕೇಳಿದರು.

     <u>**ಕ್ರಮ:**</u> ಕೆನರಾಬ್ಯಾಂಕ್ ಕಾಲೋನಿಯಲ್ಲಿ ಎಲ್ಲಾ ರಸ್ತೆಗುಂಡಿಗಳನ್ನು ಮುಚ್ಚಿರುವುದಾಗಿ ತಿಳಿಸಲಾಗಿದೆ.
   - ಕೆನರಾಬ್ಯಾಂಕ್ ಕಾಲೋನಿ 6ನೇ ಮುಖ್ಯರಸ್ತೆ, 6ನೇ ಅಡ್ಡರಸ್ತೆಯ ಮನೆ ಸಂಖ್ಯೆ. 228ರ ಬದಿಯಲ್ಲಿ ಕಸವನ್ನು ತೆಗೆದುಹಾಕದೇ ಇರುವ ಬಗ್ಗೆ.

     <u>**ಕ್ರಮ:**</u> ಸಂತೋಷ್ (Supervisor) ರವರು ಮನೆ ಬದಿಯಲ್ಲಿದ್ದ ಕಸವನ್ನು ತೆರವುಮಾಡಿರುವುದಾಗಿ ತಿಳಿಸಲಾಗಿದೆ.
   - ಕೆನರಾಬ್ಯಾಂಕ್ ಕಾಲೋನಿ 4ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ ಬೀದಿ ದೀಪಗಳು ಹಾಳಾಗಿದ್ದು ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದರಿಂದ ಬೀದಿ ದೀಪವನ್ನು ಸರಿಪಡಿಸಲು ತಿಳಿಸಿದರು.

     <u>**ಕ್ರಮ:**</u> ಸಹಾಯಕ ಕಾರ್ಯಪಾಲಕ ಅಭಿಯಂತರರು, Electrical (West) BBMP. ರವರಿಗೆ ತಿಳಿಸಲಾಗಿದೆ.

- ಕೆನರಾಬ್ಯಾಂಕ್ ಕಾಲೋನಿ 1ನೇ ಮುಖ್ಯರಸ್ತೆ, 6ನೇ ಅಡ್ಡರಸ್ತೆ ಮನೆ ಸಂಖ್ಯೆ.52ರ ಬಳಿ ನೀರಿನ ಸೋರಿಕೆಯನ್ನು ದುರಸ್ತಿಪಡಿಸುವ ಬಗ್ಗೆ ತಿಳಿಸಿದರು.

  **ಕ್ರಮ:** ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. (Ph.No: 7026266677)

4. ಶ್ರೀ. ಶಿವಶಂಕರ್. ಎ. ಎಂ. (RWA – Vinayaka Layout)- ಸದಸ್ಯರು ರವರು ಮಾತನಾಡುತ್ತಾ,

   - ವಾರ್ಡ್‌ನ ವ್ಯಾಪ್ತಿಯಲ್ಲಿರುವ 2ನೇ ಮುಖ್ಯರಸ್ತೆ ವಿನಾಯಕ ಬಡಾವಣೆಯಲ್ಲಿ ಸಾರ್ವಜನಿಕರು ಓಡಾಡುವ ರಸ್ತೆ ಹಾಗೂ ಪಾದಚಾರಿ ಮಾರ್ಗಗಳ ಮೇಲೆ 4 ವೀಲ್‌ಗಳ ವಾಹನಗಳನ್ನು ಪಾರ್ಕಿಂಗ್ ಮಾಡಿರುವುದನ್ನು ತೆರವುಗೊಳಿಸುವ ಬಗ್ಗೆ.

     **ಕ್ರಮ:** ಶ್ರೀ. ಶ್ರೀನಿವಾಸ್, (ASI – Vijayanagara Traffic)- ರವರಿಗೆ ತಿಳಿಸಲಾಗಿದೆ.

5. ಶ್ರೀ. ರಾಮು. ಟಿ -(RWA – MRCR Layout) ಸದಸ್ಯರು ರವರು ಮಾತನಾಡುತ್ತಾ,

   - ಪಿ.ಎಫ್ ಬಡಾವಣೆಯಲ್ಲಿರುವ ಹಳೇ ಕಾರುಗಳನ್ನು ಅಕ್ರಮವಾಗಿ ರಸ್ತೆಗಳ ಮೇಲೆ ಹಾಗೂ ಖಾಲಿ ಇರುವ ಸೈಟ್‌ಗಳಲ್ಲಿ ನಿಲ್ಲಿಸಿರುವುದನ್ನು ತೆರವುಗೊಳಿಸಿಕೊಡಲು ತಿಳಿಸಿದರು..
   - **ಕ್ರಮ:** ಶ್ರೀ. ಶ್ರೀನಿವಾಸ್, (ASI – Vijayanagara Traffic)- ರವರಿಗೆ ತಿಳಿಸಲಾಗಿದೆ.

ಈ ಸಂಬಂಧ ಸೂಕ್ತ ಕ್ರಮ ಕೈಗೊಳ್ಳಲು ಸಂಬಂಧ ಪಟ್ಟ ಇಲಾಖೆಗೆ ತಿಳಿಸಲು ನೋಡೆಲ್ ಅಧಿಕಾರಿಗಳು ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್ ನಂ.126 ರವರಿಗೆ ಸೂಚಿಸಲಾಯಿತು.

ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂದಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ಮತ್ತು ಸಂಚಾಲಕರು
ವಾರ್ಡ್ ಸಂಖ್ಯೆ.126

ವಾರ್ಡ್ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ.126

ಪ್ರತಿಯನ್ನು:

1) ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2) ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3) ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4) ಜಂಟಿ ಆಯುಕ್ತರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸಿದೆ.
5) ಮುಖ್ಯಅಭಿಯಂತರರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸಿದೆ.
6) ಅಧೀಕ್ಷಕ ಅಭಿಯಂತರರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸಿದೆ.
7) ಕಾರ್ಯಪಾಲಕ ಅಭಿಯಂತರರು (ಗೋವಿಂದರಾಜನಗರ) ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.